

بسم اللهِ الرّحمٰن الرّحيم

# ಹಝ್ರತ್ ಪೈಗಂಬರ್(ಸ)ರ ದಾನಶೀಲತೆಯ ಸುಂದರ ಪ್ರಸ್ತಾಪ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **12-06-2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ,* ಸೂರಃ ಬಖರದ 275ನೇ ವಚನ ಮತ್ತು ಸೂರಃ ಧಾರಿಯಾತಿನ 20ನೇ ವಚನವನ್ನು ಓದಿದ ನಂತರ ಹುಝೂರ್ *ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ನಾನು ಪಠಿಸಿದ ಮೊದಲ ವಚನ ಸೂರಃ ಬಖರದಿಂದಾಗಿದೆ. ಅದರ ಅರ್ಥ: ಯಾರು ತಮ್ಮ ಸಂಪತ್ತನ್ನು ಹಗಲು ರಾತ್ರಿ, ಗುಪ್ತವಾಗಿ ಮತ್ತು ಬಹಿರಂಗವಾಗಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೋ, ಅವರಿಗೆ ಅವರ ಪ್ರಭುವಿನ ಬಳಿ ಅವರ ಪ್ರತಿಫಲವಿದೆ. ಅವರಿಗೆ ಭಯವೇನೂ ಉಂಟಾಗದು; ಅವರು ದುಃಖಿತರೂ ಆಗಲಾರರು.

ಎರಡನೆಯದ್ದು ಸೂರಃ ಧಾರಿಯಾತಿನ ವಚನ ಆಗಿದೆ. ಅದರಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: ಅವರ ಸಂಪತ್ತಿನಲ್ಲಿ ಬೇಡುವವರಿಗೂ ಹಕ್ಕಿದೆ ಮತ್ತು ಬೇಡದವರಿಗೂ (ಅಗತ್ಯವಿದ್ದರೂ ಬೇಡಲಾಗದವರಿಗೂ) ಹಕ್ಕಿದೆ.

ಇಂದು ನಾನು ಹಝ್ರತ್ ಪೈಗಂಬರ್(ಸ)ರ ಔದಾರ್ಯ ಮತ್ತು ದಾನಶೀಲತೆಯ ಕುರಿತು ಕೆಲವು ವರದಿಗಳನ್ನು ಹೇಳುತ್ತೇನೆ. ಹಝ್ರತ್ ಪೈಗಂಬರ್(ಸ)ರ ಸ್ವಂತ ಕೃತ್ಯಗಳು ಹೇಗಿದ್ದುವು ಮತ್ತು ಅವರು ಸತ್ಯವಿಶ್ವಾಸಿಗಳಿಗೆ ಈ ಕುರಿತು ಹೇಗೆ ಪದೇಪದೇ ಗಮನಸೆಳೆದಿದ್ದರು ಎಂಬುದು ಈ ವರದಿಗಳಿಂದ ತಿಳಿದುಬರುತ್ತದೆ.

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ನಿರ್ಗತಿಕರ ಅಗತ್ಯಗಳನ್ನು ಪೂರೈಸುವ ಬಗ್ಗೆ ಬಹಳಷ್ಟು ಗಮನ ಸೆಳೆದಿದ್ದಾನೆ. ಹಝ್ರತ್ ಪೈಗಂಬರ್(ಸ) ಕೂಡ ತಮ್ಮ ನುಡಿಗಳಿಂದ ಮಾತ್ರವಲ್ಲ, ತಮ್ಮ ಪ್ರಾಯೋಗಿಕ ಮಾದರಿಯಿಂದಲೂ ಈ ಬಗ್ಗೆ ಬಹಳಷ್ಟು ಗಮನ ಸೆಳೆದಿದ್ದಾರೆ.

ಹಝ್ರತ್ ಅನಸ್(ರ) ವಿವರಿಸುತ್ತಾರೆ: ಈ ಪ್ರಾರ್ಥನಾ ಪದಗಳೊಂದಿಗೆ ಹಝ್ರತ್ ಪೈಗಂಬರ್(ಸ) ದುಆ ಮಾಡುತ್ತಿದ್ದರು: 'ಹೇ ಅಲ್ಲಾಹ್, ನಾನು ಜಿಪುಣತನದಿಂದ, ಸೋಮಾರಿತನದಿಂದ, ಮುದಿವಯಸ್ಸಿನ ಕೆಟ್ಟ ಸ್ಥಿತಿಯಿಂದ, ಖಬರಿನ ಶಿಕ್ಷೆಯಿಂದ ಹಾಗೂ ಜೀವನ ಮತ್ತು ಮರಣದ ಪರೀಕ್ಷೆಗಳಿಂದ ನಿನ್ನೊಡನೆ ಆಶ್ರಯ ಬೇಡುತ್ತೇನೆ.'

ಅದೇ ರೀತಿ, ಹಝ್ರತ್ ಅನಸ್(ರ)ರಿಂದಲೇ ವರದಿಯಾಗಿದೆ, ಹಝ್ರತ್ ಪೈಗಂಬರ್(ಸ) ಈ ದುಆ ಮಾಡುತ್ತಿದ್ದರು:

**ಅಲ್ಲಾಹುಮ್ಮ ಇನ್ನೀ ಅಊಧು ಬಿಕ ಮಿನಲ್ ಹಮ್ಮಿ ವಲ್ ಹಝುನಿ, ವಲ್ ಅಜ್‌ಝಿ ವಲ್ ಕಸಲಿ, ವಲ್ ಜುಬ್ನಿ ವಲ್ ಬುಖ್‌ಲಿ, ವಝಲಇದ್ದೈನಿ ವಗಲಬತಿರ್ರಿಜಾಲ್**.

ಅಂದರೆ: ಹೇ ಅಲ್ಲಾಹ್, ನಾನು ಚಿಂತೆ ಮತ್ತು ದುಃಖದಿಂದ, ಅಸಹಾಯಕತೆ ಮತ್ತು ಸೋಮಾರಿತನದಿಂದ, ಹೇಡಿತನ ಮತ್ತು ಜಿಪುಣತನದಿಂದ, ಸಾಲದ ಹೊರೆಯಿಂದ ಮತ್ತು ಜನರ ದಬ್ಬಾಳಿಕೆಯಿಂದ ನಿನ್ನಲ್ಲಿ ಅಭಯ ಯಾಚಿಸುತ್ತೇನೆ.

ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಕುರಿತು ಹಝ್ರತ್ ಪೈಗಂಬರ್(ಸ) ಹೀಗೆ ಉಪದೇಶ ನೀಡಿದ್ದಾರೆ: 'ಚೀಲದ ಬಾಯಿಯನ್ನು ಕಟ್ಟಿಡಬೇಡಿ, ಇಲ್ಲದಿದ್ದರೆ ನಿಮಗೂ ಏನೂ ಸಿಗದಂತೆ ತಡೆಹಿಡಿಯಲಾಗುವುದು.' ಹಝ್ರತ್ ಪೈಗಂಬರ್(ಸ) ಹೇಳಿದರು: 'ಎಣಿಸುತ್ತಲೇ ಇರಬೇಡಿ, ಇಲ್ಲದಿದ್ದರೆ ಅಲ್ಲಾಹನು ಕೂಡ ಎಣಿಸಿಯೇ ನೀಡುವನು.'

ಹಝ್ರತ್ ಪೈಗಂಬರ್(ಸ) ಹೇಳಿದರು: 'ದಾನ ಮಾಡುವವನು ಅಲ್ಲಾಹನಿಗೆ ಹತ್ತಿರವಾಗಿರುತ್ತಾನೆ, ಸ್ವರ್ಗಕ್ಕೆ ಹತ್ತಿರವಾಗಿರುತ್ತಾನೆ, ಜನರಿಗೆ ಹತ್ತಿರವಾಗಿರುತ್ತಾನೆ ಮತ್ತು ನರಕಾಗ್ನಿಯಿಂದ ದೂರವಿರುತ್ತಾನೆ. ಆದರೆ ಜಿಪುಣನು

ಅಲ್ಲಾಹನಿಂದ, ಸ್ವರ್ಗದಿಂದ ಮತ್ತು ಜನರಿಂದ ದೂರವಿರುತ್ತಾನೆ, ಆದರೆ ನರಕಾಗ್ನಿಗೆ ಹತ್ತಿರವಾಗಿದ್ದಾನೆ. ವಂಚಕನು, ಜಿಪುಣನು ಮತ್ತು ಉಪಕಾರವನ್ನು ಎತ್ತಿತೋರಿಸುವವನು ಸ್ವರ್ಗವನ್ನು ಪ್ರವೇಶಿಸಲಾರನು. ಸತ್ಯವಿಶ್ವಾಸಿಯು ಸರಳ ಸ್ವಭಾವದವನು ಮತ್ತು ದಾನಶೀಲನಾಗಿರುತ್ತಾನೆ, ಆದರೆ ದುಷ್ಟನು ವಂಚಕ ಮತ್ತು ನೀಚನಾಗಿರುತ್ತಾನೆ.'

ಒಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಉಪದೇಶಿಸುತ್ತಾ ಹೀಗೆ ಹೇಳಿದರು: 'ಎಲೈ ಆದಮನ ಪುತ್ರಾ, ನಿನ್ನ ಅಗತ್ಯಕ್ಕಿಂತ ಅಧಿಕ ಸಂಪತ್ತನ್ನು ಖರ್ಚು ಮಾಡುವುದು ನಿನಗೆ ಉತ್ತಮವಾಗಿದೆ. ಅದನ್ನು ತಡೆಹಿಡಿಯುವುದು ನಿನಗೆ ಕೆಟ್ಟದ್ದಾಗಿದೆ. ಅಗತ್ಯಕ್ಕೆ ತಕ್ಕಷ್ಟು ಇಟ್ಟುಕೊಳ್ಳುವುದರಲ್ಲಿ ತಪ್ಪಿಲ್ಲ. ಮೊದಲು ನಿನ್ನ ಅಧೀನದಲ್ಲಿರುವವರ ಪಾಲನೆ ಪೋಷಣೆಗಾಗಿ ಖರ್ಚು ಮಾಡು. ಮೇಲಿನ ಕೈ ಕೆಳಗಿನ ಕೈಗಿಂತ (ಕೊಡುವ ಕೈ ಪಡೆಯುವ ಕೈಗಿಂತ) ಉತ್ತಮವಾಗಿದೆ.'

ಒಮ್ಮೆ ಹಝ್ರತ್ ಪೈಗಂಬರ್(ಸ) ಹಝ್ರತ್ ಬಿಲಾಲ್(ರ)ರ ಬಳಿಗೆ ಹೋದರು. ಅವರ ಬಳಿ ಒಂದು ರಾಶಿ ಖರ್ಜೂರವಿತ್ತು, ಅದನ್ನು ಅವರು ಹಝ್ರತ್ ಪೈಗಂಬರ್(ಸ) ಮತ್ತು ಅವರ ಅತಿಥಿಗಳಿಗಾಗಿ ಸಂಗ್ರಹಿಸಿಟ್ಟಿದ್ದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಬಿಲಾಲ್(ರ)ರೊಡನೆ ಹೀಗೆ ಹೇಳಿದರು: 'ಈ ರಾಶಿಯ ಮೇಲೆ ನರಕದ ಬಿಸಿಗಾಳಿಯು ಅಪ್ಪಳಿಸಬಹುದು ಎಂಬ ಭಯ ನಿನಗೆ ಇಲ್ಲವೇ?' ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: 'ಹೇ ಬಿಲಾಲ್, ಖರ್ಚು ಮಾಡುತ್ತಲೇ ಇರು. ಸಿಂಹಾಸನದೊಡೆಯನಾದ ಅಲ್ಲಾಹನು ಇರುವಾಗ ಬಡತನ ಮತ್ತು ಹಸಿವಿನ ಕುರಿತು ಭಯ ಪಡಬೇಡ.'

ಒಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: 'ನಾನು ಹಂಚುವವನು ಮಾತ್ರ, ನೀಡುವವನು ಅಲ್ಲಾಹನಾಗಿದ್ದಾನೆ.'

ಔದಾರ್ಯ ಮತ್ತು ದಾನಶೀಲತೆಯ ಗುಣವು ಹಝ್ರತ್ ಪೈಗಂಬರ್(ಸ)ರಲ್ಲಿ ಪ್ರವಾದಿತ್ವಕ್ಕಿಂತ ಮೊದಲೇ ಇತ್ತು. ಇದರ ಸಾಕ್ಷ್ಯವನ್ನು ನಾವು ಮೊದಲ ದಿವ್ಯವಾಣಿಯ (ವಹ್ಯ್) ಸಂದರ್ಭದಲ್ಲಿ ಹಝ್ರತ್ ಖದೀಜ(ರ) ನೀಡಿದ ಹೇಳಿಕೆಯಲ್ಲಿ ಓದುತ್ತೇವೆ. ಹಝ್ರತ್ ಖದೀಜ(ರ) ಹೀಗೆ ಹೇಳಿದ್ದರು: 'ಗಾಬರಿಪಡಬೇಕಾದ ಅಗತ್ಯವಿಲ್ಲ. ದೇವನಾಣೆ, ಅಲ್ಲಾಹನು ನಿಮ್ಮನ್ನು ಎಂದಿಗೂ ಅವಮಾನಿಸಲಾರ. ನೀವು ಸಂಬಂಧಗಳನ್ನು ಬೆಸೆಯುತ್ತೀರಿ, ಅಸಹಾಯಕರ ಹೊರೆಯನ್ನು ಹೊರುತ್ತೀರಿ, ಯಾರೂ ಮಾಡದ ಸತ್ಕಾರ್ಯಗಳನ್ನು ಮಾಡುತ್ತೀರಿ, ಅತಿಥಿ ಸತ್ಕಾರ ಮಾಡುತ್ತೀರಿ ಮತ್ತು ನಿಜವಾದ ಸಂಕಷ್ಟಗಳ ಸಮಯದಲ್ಲಿ ಸಹಾಯ ಮಾಡುತ್ತೀರಿ.'

ಹಝ್ರತ್ ಪೈಗಂಬರ್(ಸ) ಹೇಳಿದರು: 'ಎರಡು ಗುಣಗಳು ಸತ್ಯವಿಶ್ವಾಸಿಯಲ್ಲಿ ಇರಲು ಸಾಧ್ಯವಿಲ್ಲ; ಒಂದು ಜಿಪುಣತನ ಮತ್ತೊಂದು ಕೆಟ್ಟ ನಡವಳಿಕೆ.' 'ಅನ್ಯಾಯದಿಂದ ದೂರವಿರಿ... ಜಿಪುಣತನ ಮತ್ತು ದುರಾಸೆಯಿಂದ ದೂರವಿರಿ. ಖಂಡಿತವಾಗಿಯೂ ಜಿಪುಣತನವು ನಿಮಗಿಂತ ಹಿಂದಿನವರನ್ನು ನಾಶಮಾಡಿದೆ. ಯಾವುದೇ ದಾಸನ ಹೃದಯದಲ್ಲಿ ದುರಾಸೆ ಹಾಗೂ ಜಿಪುಣತನ ಮತ್ತು ಸತ್ಯವಿಶ್ವಾಸ ಒಟ್ಟಿಗೆ ಇರಲು ಸಾಧ್ಯವಿಲ್ಲ.'

ಹಝ್ರತ್ ಅನಸ್(ರ) ವಿವರಿಸುತ್ತಾರೆ: 'ಹಝ್ರತ್ ಪೈಗಂಬರ್(ಸ) ಜನರಲ್ಲಿ ಅತ್ಯಂತ ಸುಂದರರಾಗಿದ್ದರು, ಜನರಲ್ಲಿ ಅತ್ಯಂತ ದಾನಶೀಲರಾಗಿದ್ದರು, ಜನರಲ್ಲಿ ಅತ್ಯಂತ ಧೈರ್ಯಶಾಲಿಯಾಗಿದ್ದರು.'

ಹಝ್ರತ್ ಪೈಗಂಬರ್(ಸ) ಹೇಳಿದರು: 'ಅಲ್ಲಾಹನು ಎಲ್ಲ ದಾನಶೀಲರಿಗಿಂತಲೂ ಅತ್ಯಂತ ದೊಡ್ಡ ದಾನಶೀಲನಾಗಿದ್ದಾನೆ. ನಾನು ಆದಮ್ ಸಂತತಿಗಳಲ್ಲಿ ಅತ್ಯಂತ ಹೆಚ್ಚು ದಾನಶೀಲನಾಗಿದ್ದೇನೆ.'

ಹಝ್ರತ್ ಪೈಗಂಬರ್(ಸ) ರಮಝಾನ್‌ನಲ್ಲಿ ಬಹಳಷ್ಟು ದಾನ ಮಾಡುತ್ತಿದ್ದರು ಮತ್ತು ಒಳಿತಿನ ಕಾರ್ಯಗಳಲ್ಲಿ ಬಿರುಗಾಳಿಗಿಂತಲೂ ವೇಗವಾಗಿರುತ್ತಿದ್ದರು ಎಂದು ವರದಿಗಳಲ್ಲಿ ಉಲ್ಲೇಖಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಿದ್ದರು: 'ಒಂದು ವೇಳೆ ನನ್ನ ಬಳಿ ತಿಹಾಮಾ ಪರ್ವತಗಳಷ್ಟು ಚಿನ್ನವಿದ್ದರೂ, ನಾನು ಅದನ್ನೆಲ್ಲ ನಿಮ್ಮ ನಡುವೆ ಹಂಚಿಬಿಡುತ್ತಿದ್ದೆ. ನೀವು ನನ್ನನ್ನು ಸುಳ್ಳುಗಾರನಾಗಿಯೋ ಜಿಪುಣನಾಗಿಯೋ ಕಾಣಲಾರಿರಿ.' 'ನನ್ನ ಬಳಿ ಉಹುದ್ ಪರ್ವತದಷ್ಟು ಚಿನ್ನವಿದ್ದು, ಮೂರನೇ ರಾತ್ರಿ ಕಳೆದರೂ ಅದರಲ್ಲಿ ಒಂದು ದೀನಾರ್ ಕೂಡ ನನ್ನ ಬಳಿ ಉಳಿದಿರುವುದು ನನಗೆ ಇಷ್ಟವಿಲ್ಲ, ಸಾಲ ತೀರಿಸಲು ಇಟ್ಟುಕೊಂಡಿರುವುದನ್ನು ಹೊರತುಪಡಿಸಿ.'

ಹಝ್ರತ್ ಪೈಗಂಬರ್(ಸ) ಹೇಳಿದರು: 'ಯಾರು ಅತಿ ಶ್ರೀಮಂತರಾಗಿಯೂ ಬಡವರಿಗಾಗಿ ಖರ್ಚು ಮಾಡುವುದಿಲ್ಲವೋ, ಅಂಥವರು ಪುನರುತ್ಥಾನದ ದಿನದಂದು ಅತ್ಯಂತ ಬಡವರಾಗುವರು.'

ಒಬ್ಬ ವ್ಯಕ್ತಿಯು ಹಝ್ರತ್ ಪೈಗಂಬರ್(ಸ)ರೊಡನೆ ಎರಡು ಪರ್ವತಗಳ ನಡುವೆ ಇರುವ ಆಡುಗಳನ್ನು ಬೇಡಿದನು. ಅವರು ಅವೆಲ್ಲವನ್ನೂ ಅವನಿಗೆ ಕೊಟ್ಟರು. ಅವನು ತನ್ನ ಜನಾಂಗದ ಬಳಿಗೆ ಹೋಗಿ ಹೀಗೆ ಹೇಳಿದನು: 'ಹೇ ನನ್ನ ಜನರೇ, ಸತ್ಯವಿಶ್ವಾಸವನ್ನು ಕೈಗೊಳ್ಳಿರಿ. ದೇವನಾಣೆ, ಮುಹಮ್ಮದ್(ಸ) ಎಷ್ಟೊಂದು ನೀಡುತ್ತಾರೆಂದರೆ, ಅನಂತರ ಬಡತನದ ಭಯವೇ ಇರದು.'

ಕೆಲವೊಮ್ಮೆ ಒಬ್ಬ ವ್ಯಕ್ತಿ ಪ್ರಾಪಂಚಿಕ ಆಸೆಗಾಗಿ ಮಾತ್ರ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೂ, ಅನಂತರ ಅವನಿಗೆ ಇಸ್ಲಾಮ್ ಧರ್ಮವು ಲೋಕ ಮತ್ತು ಅದರಲ್ಲಿರುವ ಎಲ್ಲದಕ್ಕಿಂತಲೂ ಹೆಚ್ಚು ಪ್ರಿಯವಾಗುತ್ತಿತ್ತು.

ಹಝ್ರತ್ ಪೈಗಂಬರ್(ಸ) ನಾಳೆಗಾಗಿ ಯಾವುದೇ ವಸ್ತುವನ್ನು ಉಳಿಸಿ ಇಡುತ್ತಿರಲಿಲ್ಲ. ಒಮ್ಮೆ ಹಝ್ರತ್ ಪೈಗಂಬರ್(ಸ) ಅಸರ್ ನಮಾಝ್ ಮುಗಿಸಿ ವೇಗವಾಗಿ ಮನೆಗೆ ಹೋದರು ಮತ್ತು ನಂತರ ಹೊರಬಂದರು. ಅವರೊಡನೆ ಕೇಳಲಾದಾಗ ಅವರು ಹೇಳಿದರು: 'ನಾನು ದಾನದ ಸಂಪತ್ತಿನಲ್ಲಿದ್ದ ಸ್ವಲ್ಪ ಚಿನ್ನವನ್ನು ಮನೆಯಲ್ಲಿಯೇ ಬಿಟ್ಟುಬಂದಿದ್ದೆ. ರಾತ್ರಿಯಿಡೀ ಅದು ನನ್ನ ಬಳಿ ಇರುವುದು ನನಗೆ ಇಷ್ಟವಾಗಲಿಲ್ಲ, ಆದ್ದರಿಂದ ನಾನು ಅದನ್ನು ಹಂಚಿಬಿಟ್ಟೆ.'

ಹಝ್ರತ್ ಉಮ್ಮು ಸಲ್ಮಾ(ರ) ವಿವರಿಸುತ್ತಾರೆ: ಒಮ್ಮೆ ಹಝ್ರತ್ ಪೈಗಂಬರ್(ಸ) ನನ್ನ ಬಳಿಗೆ ಬಂದರು, ಆಗ ಅವರ ಮುಖದ ಬಣ್ಣ ಬದಲಾಗಿತ್ತು. ಇದು ಯಾವುದಾದರೂ ನೋವು ಅಥವಾ ಕಾಯಿಲೆಯಿಂದಾಗಿ ಇರಬಹುದು ಎಂದು ನಾನು ಭಾವಿಸಿದೆ. ನಾನು ಕೇಳಿದೆ: 'ಯಾ ರಸೂಲಲ್ಲಾಹ್(ಸ), ನಿಮ್ಮ ಮುಖದ ಬಣ್ಣ ಬದಲಾಗಿದೆ. ಇದು ಯಾವುದಾದರೂ ಸಂಕಷ್ಟದ ಕಾರಣದಿಂದಲೇ?' ಹಝ್ರತ್ ಪೈಗಂಬರ್(ಸ) ಹೇಳಿದರು: 'ಅಲ್ಲ, ಇದು ಸಂಜೆ ನಮ್ಮ ಬಳಿ ಬಂದಿದ್ದ ಆ ಏಳು ದೀನಾರ್‌ಗಳ ಕಾರಣದಿಂದಾಗಿದೆ. ರಾತ್ರಿ ಕಳೆದರೂ ನಾವು ಅವುಗಳನ್ನು ಖರ್ಚು ಮಾಡಲಿಲ್ಲ. ನಾನು ಅವನ್ನು ಹಾಸಿಗೆಯ ಮೂಲೆಯಲ್ಲಿ ಮರೆತುಬಿಟ್ಟಿದ್ದೆ, ನನಗೆ ನೆನಪಾದಾಗ ನನಗೆ ಬಹಳ ನೋವಾಯಿತು.'

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: 'ಹಝ್ರತ್ ಪೈಗಂಬರ್(ಸ)ರ ಸ್ಥಿತಿ ಹೇಗಿತ್ತೆಂದರೆ, ತಮ್ಮ ಬಳಿ ಇರುತ್ತಿದ್ದ ಎಲ್ಲವನ್ನೂ ಅವರು ದಾನ ಮಾಡಿಬಿಡುತ್ತಿದ್ದರು.'

ಹಝ್ರತ್ ಪೈಗಂಬರ್(ಸ) ಬಹಳ ನಾಚಿಕೆ (ಲಜ್ಜೆ) ಉಳ್ಳವರಾಗಿದ್ದರು. ಅವರೊಡನೆ ಏನಾದರೂ ಬೇಡಿದರೆ ಅವರು ಅದನ್ನು ನೀಡುತ್ತಿದ್ದರು. ದಾನ ಮಾಡುವ ವಿಷಯದಲ್ಲಿ ಅವರು ಎಲ್ಲ ಜನರಿಗಿಂತಲೂ ಅತ್ಯಂತ ದಾನಶೀಲರಾಗಿದ್ದರು.

ಒಮ್ಮೆ ಹಝ್ರತ್ ಪೈಗಂಬರ್(ಸ)ರ ಬಳಿ ಎಪ್ಪತ್ತು ಸಾವಿರ ದಿರ್ಹಮ್‌ಗಳು ಬಂದವು. ಈ ಸಂಪತ್ತನ್ನು ಒಂದು ಚಾಪೆಯ ಮೇಲೆ ಇಡಲಾಯಿತು. ಹಝ್ರತ್ ಪೈಗಂಬರ್(ಸ) ಈ ಸಂಪತ್ತನ್ನು ಹಂಚಲು ನಿಂತರು. ಏನೂ ಸಿಗದೇ ಹಿಂತಿರುಗಿದ ಯಾವನೇ ಯಾಚಕ ಕೂಡ ಇರಲಿಲ್ಲ. ಹೀಗೆ ಅವರು ಸಂಪೂರ್ಣ ಸಂಪತ್ತನ್ನು ಹಂಚಿಬಿಟ್ಟರು.

ಹಝ್ರತ್ ಉಸ್ಮಾನ್(ರ) ಹಝ್ರತ್ ಪೈಗಂಬರ್(ಸ)ರಿಗೆ ದ್ರಾಕ್ಷಿಯ ಒಂದು ಗೊಂಚಲನ್ನು ಉಡುಗೊರೆಯಾಗಿ ನೀಡಿದರು. ಖರ್ಜೂರದ ಒಂದು ಗೊಂಚಲು ಎಂದೂ ಹೇಳಲಾಗುತ್ತದೆ. ಹೇಗಿದ್ದರೂ, ಒಬ್ಬ ಯಾಚಕ ಬಂದಾಗ, ಹಝ್ರತ್ ಪೈಗಂಬರ್(ಸ) ಅದನ್ನು ಅವನಿಗೆ ನೀಡಿಬಿಟ್ಟರು. ಅನಂತರ ಹಝ್ರತ್ ಉಸ್ಮಾನ್(ರ) ಅದನ್ನು ಒಂದು ದಿರ್ಹಮಿಗೆ ಆತನಿಂದ ಖರೀದಿಸಿದರು. ಅವರು ತಂದಿದ್ದ ಆ ಗೊಂಚಲು ಯಾವುದೋ ವಿಶೇಷ ತರದ್ದು ಆಗಿರಬಹುದು, ಖರ್ಜೂರಗಳು ಒಳ್ಳೆಯದಾಗಿರಬಹುದು. ಅವರು ಆ ಯಾಚಕನಿಂದ ಅದನ್ನು ಒಂದು ದಿರ್ಹಮಿಗೆ ಖರೀದಿಸಿ, ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಮತ್ತೆ ಅರ್ಪಿಸಿದರು. ಅನಂತರ ಆ ಯಾಚಕ ಮತ್ತೆ ಬಂದಾಗ ಹಝ್ರತ್ ಪೈಗಂಬರ್(ಸ) ಅದನ್ನು ಪುನಃ ಅವನಿಗೆ ನೀಡಿದರು. ಈ ರೀತಿ ಮೂರು ಬಾರಿ ನಡೆಯಿತು. ಹಝ್ರತ್ ಉಸ್ಮಾನ್(ರ) ಖರೀದಿಸಿ ಹಝ್ರತ್ ಪೈಗಂಬರ್(ಸ)ರಿಗೆ ಅರ್ಪಿಸುತ್ತಿದ್ದರು, ಯಾಚಕ ಬಂದು ಪುನಃ ಕೇಳುವಾಗ ಪೈಗಂಬರ್(ಸ) ಅದನ್ನು ಅವನಿಗೆ ನೀಡುತ್ತಿದ್ದರು. ಕೊನೆಗೆ ಹಝ್ರತ್ ಪೈಗಂಬರ್(ಸ) ಬಹಳ ಸೌಮ್ಯವಾಗಿ ಆ ಯಾಚಕನೊಡನೆ ಹೀಗೆ ಹೇಳಿದರು: 'ನೀನು ಯಾಚಕನೇ ಅಥವಾ ವ್ಯಾಪಾರಿಯೇ. ನೀನು ಭಿಕ್ಷೆ ಬೇಡಲು ಬಂದಿದ್ದೀಯಾ. ಯಾಚಕರು ಹೀಗೆ ಮಾಡುವುದಿಲ್ಲ, ನೀನು ದಿರ್ಹಮ್‌ಗಳನ್ನು ಸಂಪಾದಿಸುತ್ತಾ ವ್ಯಾಪಾರ ಮಾಡುತ್ತಿದ್ದೀಯಾ.' ಹಝ್ರತ್ ಪೈಗಂಬರ್(ಸ) ಅವನಿಗೆ ಕೊಡದೇ ಇರಲಿಲ್ಲ, ಆದರೆ 'ನೀನು ಮಾಡುತ್ತಿರುವ ಈ ಕೆಲಸ ಸೂಕ್ತವಲ್ಲ' ಎಂದು ಅತ್ಯಂತ ಜಾಣ್ಮೆಯಿಂದ ಉಪದೇಶ ನೀಡಿದರು.

(ಹಝ್ರತ್ ಅಬ್ದುಲ್ಲಾ ಬಿನ್ ಸಲಾಮ್(ರ) ವರದಿ ಮಾಡಿದ ಹಝ್ರತ್ ಝೈದ್ ಬಿನ್ ಸಅ್‌ನ(ರ)ರ ಇಸ್ಲಾಮ್ ಸ್ವೀಕಾರದ ಘಟನೆಯನ್ನು ವಿವರಿಸಿದ ನಂತರ ಹುಝೂರ್ ಹೀಗೆ ಹೇಳಿದರು:) ಇದು ಹಝ್ರತ್ ಪೈಗಂಬರ್(ಸ)ರ ಉನ್ನತ ನೈತಿಕತೆಯಾಗಿದೆ, ಸಾಲ ಪಡೆದು ಒಂದು ಸಮುದಾಯವನ್ನು ಹಸಿವಿನಿಂದ ಪಾರು ಮಾಡಿದ್ದರು. ಮಾತ್ರವಲ್ಲ ತಮ್ಮ

ನೈತಿಕತೆಯಿಂದ ಒಬ್ಬ ಯಹೂದಿ ವಿದ್ವಾಂಸನನ್ನು ಕೂಡ ಮುಸಲ್ಮಾನನನ್ನಾಗಿ ಮಾಡಿದರು. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುಮ್ಮಜೀದ್.**

––––––––––––*****––––––––––––

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِیَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*
At, ***'Masjid Mubarak',*** *Islamabad, Tilford,* U.K. On 12-06-2026
**Summarized by** *Majlis Ansarullah Bharat*
***Kannada Translation:*** Moulavi Inamullah for Kannada Desk, Qadian
***Reviewed by:*** M.P Ibrahim | ***Layout:*** Basheer K.P. Manjeshwar
***Published By:*** Kannada Isha'at Team for Nazarath Nashr-O-Isha'ath, Qadian
***Email:*** *khutuba.kannada@gmail.com*
**You can find all the Sermons archived at**: www.alislam.org/friday-sermon